ಆಧುನಿಕ ಮಲಯಾಳ ಸಾಹಿತ್ಯ ಕ್ಷೇತ್ರಕ್ಕೆ ಹೊಸ ಆಯಾಮವನ್ನು ಕೊಟ್ಟ ಎಂ.ಟಿ.ವಾಸುದೇವನ್ ನಾಯರ್ ಅವರು 89ರ ಹರೆಯದ ಹಿರಿಯ ಲೇಖಕ. ಸಿನಿಮಾ ನಿರ್ದೇಶಕರಾಗಿ, ಚಿತ್ರಕತೆ ಬರಹಗಾರರಾಗಿ ಅವರು ತಮ್ಮ ಸಾಹಿತ್ಯ ಕೃಷಿಯ ಎಲ್ಲೆಗಳನ್ನು ವಿಸ್ತರಿಸಿಕೊಂಡವರು. ನ್ಯೂಯಾರ್ಕ್ ಹೆರಾಲ್ಡ್ ಟ್ರಿಬ್ಯೂನ್ ಆಯೋಜಿಸಿದ್ದ ವಿಶ್ವ ಸಣ್ಣಕಥಾ ಸ್ಪರ್ಧೆಯಲ್ಲಿ ತಮ್ಮ 20ರ ವಯಸ್ಸಿನಲ್ಲಿಯೇ ಭಾಗವಹಿಸಿ ಬಹುಮಾನ ಗೆದ್ದವರು. ಅವರು ಬರೆದ ಅನೇಕ ಕಾದಂಬರಿಗಳು ಮಲಯಾಳ ಸಾಹಿತ್ಯ ಚರಿತ್ರೆಯಲ್ಲಿ ಹೊಸ ಮೈಲಿಗಲ್ಲು ಸೃಷ್ಟಿಸಿವೆ. ಇಂಗ್ಲಿಷ್ ಮತ್ತು ಇತರ ಭಾಷೆಗೆ ಅನುವಾದಗೊಂಡಿವೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪದ್ಮಭೂಷಣ ಸೇರಿದಂತೆ ಅನೇಕ ಪುರಸ್ಕಾರಗಳು ಅವರನ್ನು ಅರಸಿ ಬಂದಿವೆ.

ಸೇರಿದಾಗ ಅವರ ಕಾಲು ತೊಳೆದುದೂ ಅವನೇ ಅಂತೆ. ತುಂಬಾ ನಾದಸ್ವರಗಳೂ ಅಂದು ರಾತ್ರಿ ಕೇಳಿಸುತ್ತಿದ್ದವು.

ಅದೆಲ್ಲವೂ ಒಳ್ಳೆಯದೇ. ಆದರೆ, ಕಾಲು ತೊಳೆದುದು ಮಾತ್ರ ನನಗೆ ಅಷ್ಟಾಗಿ ಹಿಡಿಸಲಿಲ್ಲ. ಮತ್ತೆ ಅವನು ಏನೇನು ವಿಷಯಗಳನ್ನು ಹೇಳುತ್ತಾನೊ. 'ನಾನು ಏನೆಂದು ಅವರನ್ನು ಕರೆಯುವುದು? ಬಾವ'

ಕರುಣಾಕರ, ಗೋಪಿ ಎಲ್ಲರೂ ಭಾಗ್ಯಶಾಲಿಗಳೆಂದು ನನಗನ್ನಿಸಿತು. ಮನೆಯಲ್ಲಿ ಒಂದು ಮದುವೆ ನಡೆಯುವುದು ಒಳ್ಳೆಯ ವಿಷಯ. ಅಲಂಕಾರ ಮಾಡಿದ ಚಪ್ಪರ. ಪೆಟ್ರೋಮ್ಯಾಕ್ಸ್‌ನ ಬೆಳಕು, ಜನಸಂದಣಿ, ಮನೆ ತುಂಬಾ ಹೆಂಗಸರು... ಒಂದು ಬಿಟ್ಟು ಹೋಯಿತು: ಗ್ರಾಮೋಫೋನ್ ಹಾಡೂ!

ನನ್ನ ಮನೆಯಲ್ಲಿ ಒಂದು ಮದುವೆ ಸಮಾರಂಭ ನಡೆಯಲು ಯಾವುದೇ ದಾರಿಯಿಲ್ಲ. ನನಗೊಬ್ಬಳು ತಂಗಿಯಿಲ್ಲ. ನನ್ನ ಪುಸ್ತಕಗಳಿಗೆ ಸುಂದರವಾದ ತಟ್ಟೆಯಿಲ್ಲ. ಚಂದದ ಅಕ್ಷರಗಳಲ್ಲಿ ಬರೆದುದಿಲ್ಲ. ನನಗೊಬ್ಬ ಬಾವನೂ ಬರುವುದಕ್ಕಿಲ್ಲ! ಇದ್ದಿದ್ದರೆ ಕರುಣಾಕರನಿಗಿಂತಲೂ ಹೆಚ್ಚು ವಿಜೃಂಭಿಸುತ್ತಿದ್ದೆ. ಆಗ ಕರುಣಾಕರ ನನ್ನನ್ನು ಕಾಣಬೇಕು. ಅವನ ಮನೆಯ ಮದುವೆ ಅಷ್ಟೇನೂ ಚೆನ್ನಾಗಿ ಆಗಲಿಲ್ಲ. ಅಲ್ಲವಾದರೂ ಅವನೆಂತಹ ಪೆದ್ದು!.

ನನ್ನ ಪುಸ್ತಕಗಳಿಗೆ ನಾನೇ ತಟ್ಟೆ ಹಾಕಿಕೊಳ್ಳುವುದು. ಚಂದವಿರುವುದಿಲ್ಲ. ಅಣ್ಣಂದಿರಲ್ಲಿ ಹೇಳಿದರೆ ಏನಾದರೂ ಹೇಳುತ್ತಾರೆ. ಪ್ರತಿಯಾಗಿ ಮಾತನಾಡಿದರೆ ವಿಕೃತವಾದ ಸಾರ್ವಜನಿಕ ಅಭಿಪ್ರಾಯ ಹೇಳಿ ತಲೆಗೊಂದು ಏಟನ್ನು ಸಮ್ಮಾನಿಸುವರು. ಅಪ್ಪನ ಪತ್ರಗಳು ಆಗಾಗ ಬರುವುದಿದೆ. ಅಮ್ಮ ಅದನ್ನು ಗಮನವಿಟ್ಟು ಓದುವರು. ಹತ್ತನೇ ಕ್ಲಾಸಿನ ದೊಡ್ಡ ಅಣ್ಣ ಓದುವಾಗ ಮತ್ತೊಮ್ಮೆ ಅದನ್ನು ಕೇಳಿಸಿಕೊಳ್ಳಲೂ ಬೇಕು.

'...ಮಕ್ಕಳೆಲ್ಲ ಸೌಖ್ಯವಾಗಿರುವರೆಂದು ಭಾವಿಸಿದ್ದೇನೆ. ಅವರ ಕುರಿತು ವಿವರಗಳನ್ನು ಪ್ರತ್ಯೇಕವಾಗಿ ಬರೆಯುತ್ತಿಯಲ್ಲ...' ತಣಿಯದ ಕುತೂಹಲದಿಂದ ನಾನದೆಲ್ಲವನ್ನು ಕೇಳಿಸಿಕೊಳ್ಳುತ್ತೇನೆ. ಮಕ್ಕಳು ಎಂದು ಹೇಳಿದ್ದರಲ್ಲಿ ನಾನೂ ಇದ್ದೇನಲ್ಲ. ಮುನ್ನೂರಕ್ಕೂ ಹೆಚ್ಚು ಮೈಲುಗಳ ದೂರದಲ್ಲಿ ಕೆಲಸ ಮಾಡುವ ಅಪ್ಪನ ಕುರಿತು ನಾನು ನೆನಪು ಮಾಡಿಕೊಳ್ಳುತ್ತೇನೆ. ಅವರು ಯಾವುದೋ ಒಂದು ಕಂಪನಿಯಲ್ಲಿ ಉದ್ಯೋಗದಲ್ಲಿದ್ದಾರೆ. ಅಣ್ಣಂದಿರೆಲ್ಲ ಅಪ್ಪನ ಆಫೀಸಿಗೆ ಹೋಗಿ ಬಂದಿದ್ದಾರೆ. ಸಿಲೋನಿನ ಕುರಿತು ಹೇಳುವುದೆಲ್ಲವನ್ನು ನಾನು ಗಮನವಿಟ್ಟು ಕೇಳಿಸಿಕೊಳ್ಳುತ್ತೇನೆ. ಏನೇ ಆದರೂ ಅಲ್ಲಿನ ಜನರು ಮಾತನಾಡುವುದು ನನಗೆ ತಿಳಿಯುವುದಿಲ್ಲ. ಕಾರಣ, ಅವರು ಮಾತನಾಡುವುದು ಯಾವುದೋ ಬೇರೆ ಭಾಷೆ. ಅಲ್ಲಿನ ಜನರು ಭಯಂಕರ ಸ್ವರೂಪಿಗಳು. ರಸ್ತೆಯಲ್ಲಿ ಮಕ್ಕಳನ್ನೇನಾದರೂ ಕಂಡರೆ ಸೊಂಟದಿಂದ ಕತ್ತಿ ಹಿರಿದು ಕೊರಳು ತುಂಡರಿಸುತ್ತಾರೆಂದು ಬಾಲಣ್ಣ ಹೇಳುವುದು. ಅಂತಹ ಒಂದು ಘಟನೆಯನ್ನು ಸ್ವಯಂ ಕಣ್ಣುಗಳಿಂದ ಕಂಡವನು ಬಾಲಣ್ಣ. ಅದನ್ನು ಕೇಳಿಸಿಕೊಂಡಾಗ ಭಯವಾಯಿತು. ಈ ಕ್ರೂರ ಜನರ ನಡುವೆ ಅಪ್ಪ ಬದುಕುತ್ತಿರುವುದು, ದೇವರೆ! 'ಮಕ್ಕಳನ್ನು ಮಾತ್ರವೇ ಕೊಲ್ಲುವುದು; ಅಲ್ಲವೇ?', 'ಹಣಕ್ಕಾಗಿ ಯಾರನ್ನು ಬೇಕಾದರೂ ಕೊಲ್ಲುತ್ತಾರೆ...'